## ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

**ಸಿ.ಸಿ ನಂಃ 794/2023**

**ಸಿಡಬ್ಲ್ಯೂಃ 1 ಪಿಡಬ್ಲ್ಯೂಃ 1**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಹೆಚ್ ನ್ಯಾಯವಾದಿರವರಿಂದಃ**

ಸಾಕ್ಷಿಗೆ ಸರ್ವೆ ನಂಬ್‌ರ್ 34/4 ರ ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ನನಗೆ ಜಮೀನಿನ ದಾಖಲಾತಿಗಳನ್ನು ನೋಡಲು ಬರುವುದಿಲ್ಲ ಎಂದು ನುಡಿಯುತ್ತಾರೆ . ನನ್ನ ಗಂಡನಾದ ಚಾಸಾ-5 ರವರು ಪ್ರತಿ ವಾಯ್ದೆ ಗೂ ಬರುತ್ತಿದ್ದಾರೆ ಆದರೆ ಅವರ ಆರೋಗ್ಯ ಸರಿ ಇರುವುದಿಲ್ಲ . ಇಂದು ಕೂಡಾ ಅವರು ಬಂದಿರುತ್ತಾರೆ . ಸರ್ವೆ ನಂಬರ್ 34/4 ಈಗ ಮಂಗಲನ ಹೆಸರಿನಲ್ಲಿದೆ . ಚಾಸಾ-5 ರವರು ಸದ್ರಿ ಮಂಗಲನ ವಿರುದ್ದ ಸಲ್ಲಿಸಿರುವ ದಾವೆಯಲ್ಲಿ ಅವರು ನನಗೆ ಮುಕ್ತಾರನಾಮೆಯನ್ನು ಬರೆದುಕೊಟ್ಟು ಆ ದಾವೆಯಲ್ಲಿಯೂ ಕೂಡಾ ನಾನೇ ಸಾಕ್ಷಿಯನ್ನು ನುಡಿಯುತ್ತಿದ್ದೇನೆ .

ಮಳೆಗಾಲದಲ್ಲಿ ಎಲ್ಲರ ಮನೆಯಲ್ಲಿ ಛತ್ರಿ 3-4 ಇರುತ್ತದೆ ಎಂದರೆ ಸರಿ . ನಮ್ಮ ಮನೆಯಲ್ಲಿ Wolf ಕಂಪೆನಿಯ 2 ಛತ್ರಿ ಇದೆ . ನಮ್ಮ ಮನೆಯ ಎದುರಿಗೆ ರಸ್ತೆ ಇದೆ . ಸದ್ರಿ ರಸ್ತೆಯು ನಮ್ಮ ಮನೆಯಿಂದ ಎಷ್ಟು ದೂರದಲ್ಲಿದೆ ಎಂದು ಹೇಳಲು ಬರುವುದಿಲ್ಲ . ನಿಪಿ-2 ಪಂಚನಾಮೆಯಲ್ಲಿ ಘಟನಾ ಸ್ಥಳದಿಂದ ನಮ್ಮ ಮನೆಯು ಎಷ್ಟು ದೂರದಲ್ಲಿದೆ ಎಂದು ನಾನು ಹೇಳಿ ಬರೆಸಿರುತ್ತೇನೆ . ಅದು ಎಷ್ಟು ಮೀಟರ್ ದೂರದಲ್ಲಿದೆ ಎಂದು ಬರೆಸಿರುತ್ತೇನೆ ಎಂದು ನನಗೆ ನೆನಪಿಲ್ಲ .

ನಮ್ಮ ಮನೆಯು ಇರುವ ಜಾಗ ಹಾಗೂ ರಸ್ತೆಯ ಹೊರಗೆ ಇರುವ ಜಾಗವು ಬೆಟ್ಟದ ಸ್ಥಳ ಎಂದರೆ ಸರಿ . ನಮ್ಮ ಮನೆಯಿಂದ ರಸ್ತೆಯವರೆಗೆ ಸಾಕಷ್ಟು ಕಾಡು ಜಾತಿಯ ಮರಗಳು ಇದೆ ಎಂದರೆ ಸರಿ . ನಿಪಿ-2 ಪಂಚನಾಮೆಯಲ್ಲಿ ನಮ್ಮ ಮನೆಯಿಂದ ಘಟನಾ ಸ್ಥಳವು 80 ಮೀ ಇದೆ ಎಂದು ಹೇಳಿ ಬರೆಸಿರುವುದಿಲ್ಲ . ಆರೋಪಿತರ ಮನೆಯ ಸುತ್ತಮುತ್ತಲೂ ತಂತಿ ಬೇಲಿಯನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿ . ಸರ್ವೆನಂಬರ್ 34/4 ಜಮಿನಿಗೆ ಹೋಗಲು ಮಾತ್ರ ಆರೋಪಿತನ ಕಾಂಪೌಂಡ್ ಒಳಗೆ ಹೋಗಬೇಕಾಗುತ್ತದೆ ಎಂದರೆ ಸರಿ . ನಮ್ಮ ಬೇರೆ ಎಲ್ಲಾ ಮಾಲ್ಕೀ ಜಮೀನುಗಳಿಗೆ ಹೋಗಲು ಪ್ರತ್ಯೇಕವಾದ ದಾರಿ ಇದೆ . ನಿಪಿ-3 ನಕಾಶೆಯನ್ನು ನಾನು ಗುರುತು ಮಾಡಲುಆಗುವುದಿಲ್ಲ ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ .

ನಿಪಿ-4 ರಿಂದ 7 ಭಾವ ಚಿತ್ರಗಳನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿರುವ ರಸ್ತೆಯನ್ನು ಹೊರತುಪಡಿಸಿ ಅಕ್ಕಪಕ್ಕದಲ್ಲಿ ದಟ್ಟವಾದ ಕಾಡು ಇದೆ ಎಂದರೆ ಸಾಕ್ಷಿಯ ದಟ್ಟವಾದ ಕಾಡು ಇಲ್ಲ ಆದರೆ ಸಾಕಷ್ಟು ಗಿಡಮರಗಳು ಇದೆ ಎಂದು ನುಡಿಯುತ್ತಾರೆ . ಸದ್ರಿ ಭಾವ ಚಿತ್ರಗಳಲ್ಲಿ ಘಟನಾ ಸ್ಥಳದಿಂದ ನಮ್ಮ ಮನೆಯು ಕಾಣುವಂತೆ ಇರುವುದಿಲ್ಲ . ನಾನು ಹೇಳುವಂತೆ ನಮ್ಮ ಮನೆಯಿಂದ ಘಟನಾ ಸ್ಥಳವು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ .

ಘಟನಾ ಸ್ಥಳದ ಚೆಕ್ ಬಂದಿಯನ್ನು ನನಗೆ ಹೇಳಲು ಬರುವುದಿಲ್ಲ . ಘಟನಾ ಸ್ಥಳದ ರಸ್ತೆಯಿಂದ ಯಾವ ದಿಕ್ಕಿನಲ್ಲಿ ನಮ್ಮ ಮನೆ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ . ನಮ್ಮ ಮನೆಯಿಂದ ಕೇವಲ 3 ಕಿಮೀ ದೂರದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರ ,ಕ್ಯಾದಗಿ ಇದೆ ಎಂದರೆ ಸರಿ . ಚಾಸಾ-3 ರವರೊಂದಿಗೆ ಕಾರು ಇದೆ ಹಾಗೂ ನಮ್ಮ ಊರಿನವರ ಬಳಿ ಕಾರುಗಳು ಇದೆ ಎಂದರೆ ಸರಿ .

ಘಟನೆ ಆದ ತಕ್ಷಣ ಈ ಪ್ರಕರಣದ ಸಾಕ್ಷಿದಾರರನ್ನು ಹೊರುತುಪಡಿಸಿ ಪರಮೇಶ್ವರ ಮಹಾಬಲೇಶ್ವರ ಹೆಗಡೆ , ಗೋವಿಂದ ಮತ್ತು ಸುಮಿತ್ರ ಅವರು ಬಂದಿದ್ದರು . ಪರಮೇಶ್ವರ ಮಹಾಬಲೇಶ್ವರ ಹೆಗಡೆ ಅವರು ಆ್ಯಂಬ್ಯುಲೆನ್ಸ್ ಗೆ ಕರೆ ಮಾಡಿರುತ್ತಾರೆ . ಇದರ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ. ಆ್ಯಂಬ್ಯುಲೆನ್ಸ್ ನಲ್ಲಿ ನಾನು ಹೋಗಿರುವುದಿಲ್ಲ . ನಾನು ನಂತರ 1-00 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ . ಘಟನೆಯಾದ ನಂತರ , ದೂರು ಕೊಡುವ ಪೂರ್ವದಲ್ಲಿ ನಾನು ಪೋಲಿಸರಿಗೆ ಯಾವುದೇ ಕರೆಯನ್ನು ಮಾಡಿರುವುದಿಲ್ಲ . ನಮ್ಮ ಮನೆಯಿಂದ 6 ಕಿಮೀ ದೂರದಲ್ಲಿ ಬಿಳಗಿ Out post ಇದೆ ಎಂದರೆ ಸರಿ . ಸಿದ್ದಾಪುರಕ್ಕೆ ಬರಬೇಕಾದರೆ ಸದ್ರಿ Out post ಅನ್ನು ದಾಟಿ ಬರಬೇಕಾಗುತ್ತದೆ ಎಂದರೆ ಸರಿ .

ಆರೋಪಿತನು ಚಾಸಾ-4 ರವರಿಗೆ ಛತ್ರಿಯಿಂದ ಹಲ್ಲೆ ಮಾಡಿರುವುದಿಲ್ಲ , ಚಾಸಾ-4 ರವರಿಗೆ ಗಾಯ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ . ಚಾಸಾ-4 ರವರು ಬೆಟ್ಟದ ಮೇಲೆ ಅಥವಾ ರಸ್ತೆಯ ಮೇಲೆ ಬಿದ್ದು ಗಾಯ ಮಾಡಿಕೊಂಡಿರುತ್ತಾರೆ ಅದು ಆರೋಪಿತನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ . ಮಂಗಲ ಎನ್ನುವವರು ನಮ್ಮ ವಿರುದ್ಧ ದೂರನ್ನು ನೀಡಿದ್ದು , ಸದ್ರಿ ದೂರಿನಲ್ಲಿ ನಾನು ಪೋಲಿಸ್ ಠಾಣೆಯಲ್ಲಿ ನಾನು ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದರಿಂದ ನಾನು ಆ ದ್ವೇಷದಿಂದ ಆರೋಪಿತನ ವಿರುದ್ಧ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಆರೋಪಿತರ ವಿರುದ್ಧ ದೂರನ್ನು ದಾಖಲಿಸಲೇ ಬೇಕು ಎಂಬ ನಿಟ್ಟಿನಲ್ಲಿ ನಮ್ಮ ಸ್ವಂತ ಗಾಡಿ ಇದ್ದರೂ ಕೂಡಾ ಆ್ಯಂಬ್ಯುಲೆನ್ಸ್ ಅನು ಕರೆಸಿ ಅದರಲ್ಲಿ ಚಾಸಾ-4 ರನಮ್ನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸಾಕ್ಷಿಯು ನಮ್ಮ ಮನೆಯಲ್ಲಿ ಕಾರು ಇಲ್ಲ ಎಂದು ನುಡಿಯುತ್ತಾರೆ . ಪೋಲಿಸ್ ದೂರು ಆಗಲೇಬೇಕು ಎಂಬ ಉದ್ದೇಶದಿಂದ ನಾನು ಬಿಳಿಗಿ Out post ಗೆ ಹೋಗಿರುವುದಿಲ್ಲ ಹಾಗೂ ಕ್ಯಾದಗಿಯಲ್ಲಿರುವ ಆರೋಗ್ಯ ಕೇಂದ್ರಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮುಮಾ-1 ರಿಂದ ಆರೋಪಿತನು ಚಾಸಾ-4 ರವರಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ . ನಾನು

ಘಟನಾ ಸ್ಥಳದಿಂದ ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇನೆ . ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಆಸ್ಪ್ರೆಗೆ ಬಂದಿರುತ್ತಾರೆ . ಚಾಸಾ-5 ರವರು ದೂರನ್ನು ನೀಡಲು ತೊಂದರೆ ಇತ್ತೆ ಎಂದರೆ ಸಾಕ್ಷಿಯು ಅವರು ಅನಾರೋಗ್ಯದಲ್ಲಿದ್ದ ಕಾರಣ ನಾನೇ ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ . ಸದ್ರಿ ಆ್ಯಂಬ್ಯುಲೆನ್ಸ್ ನಲ್ಲಿ ಚಾಸಾ-5 ರವರು ಚಾಸಾ-4

ರವರೊಂದಿಗೆ .ಹೋಗಿರುತ್ತಾರೆ . ಸಿದ್ದಾಪುರ ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ನಿಪಿ–1 ದೂರನ್ನು ಚಾಸಾ–3 ರವರು ಬರೆದಿರುತ್ತಾರೆ . ಚಾಸಾ–3 ರವರು ಚಾಸಾ–4 ರವರನ್ನು ಚಾಸಾ–5 ವರೊಂದಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ . ನನಗೆ ಕನ್ನಡ ಓದಲು ಬರುತ್ತದೆ ಆದರೆ ಬರೆಯಲು ಬರುವುದಿಲ್ಲ. ನಾನು ನಿಪಿ–1 ಫಿರ್ಯಾದನ್ನು ಹೇಳಿ ಬರೆಸಿರುತ್ತೇನೆ ಹಾಗೂ ಅದನ್ನು ಓದಿ ಸಹಿ ಮಾಡಿರುತ್ತೇನೆ . ನಿಪಿ–1 ರಲ್ಲಿರುವ ಎಲ್ಲಾ ಸಂಗತಿಗಳನ್ನು ನನಗೆ ಈಗ ಹೇಳಲು ಆಗುವುದಿಲ್ಲ . ಪೋಲಿಸರು ಪಂಚನಾಮೆಗೆ ಬರುವ ಪೂರ್ವದಲ್ಲಿ ನಮಗೆ ತಿಳಿಸಿರುವುದಿಲ್ಲ . ಸಾಕ್ಷಿದಾರರನ್ನು ನಾನೇ ಕರೆದಿರುತ್ತೇನೆ . ನಿಪಿ–2 ಪಂಚನಾಮೆಯನ್ನು ಸಾಕ್ಷಿದಾರರು ಹೇಳಿ ಬರೆಸಿರುವುದು ನಾನು ನೋಡಿರುವುದಿಲ್ಲ .

ನಿಪಿ–3 ನಕಾಶೆಯನ್ನು ಎಕಲ್ಲಿ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ನಾನು ನಿಪಿ–2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ ಆದರೆ ಅದರಲ್ಲಿ ಏನು ಬರೆಯಾಲಗಿದೆ ಎಂದು ನನಗೆ ಗೂತ್ತಿಲ್ಲ . ನಿಪಿ–2 ನ್ನು ನಾನು ಸ್ಥಳದಲ್ಲಿ ಮಾಡಿರುತ್ತೇನೆ ಹಾಗೂ ನಿಪಿ– 3 ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ . ನಾನು ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಯಾವುದೇ ಘಟನೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಘಟನೆಯನ್ನು ನಮ್ಮ ಮನೆಯಿಂದ ನೋಡಿರುವುದಿಲ್ಲ ಹಾಗೂ ಘಟನಾ ಸ್ಥಳವು ನಮ್ಮ ಮನೆಯಿಂದ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ .

**<u>ಮರುವಿಚಾರಣೆಃ ಇರುವುದಿಲ್ಲ.</u>**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ ಸರಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**